## 'ಸ್ನೇಕ್ಸ್'

ಅದೊಂದು ಭಾನುವಾರ ಮೊಮ್ಮಗಳು ಅನನ್ಯಳನ್ನು ಪಾರ್ಕಿಗೆ ಕರೆದುಕೊಂಡು ಹೋಗಲು ತಯಾರಾಗುತ್ತಿದ್ದೆ. 'ಪಾರ್ಕಿನಲ್ಲಿ ಎಲ್ಲರೂ ಸ್ನೇಕ್ಸ್ ತಿಂತಿರ್ತಾರೆ, ನಾವೂ ಒಯ್ಯುವ' ಅಂದಾಗ ಗಾಬರಿಯಾಗಿ, 'ನೀ ಯಾವಾಗ ನೋಡಿದೆ?' ಎಂದು ಕೇಳಿದೆ. 'ಎಷ್ಟೊ ಸಲ ನೋಡಿದ್ದೀನಿ, ಆಟವಾಡಿದ ಮೇಲೆ ಅಲ್ಲೇ ಬೆಂಚಿನ ಮೇಲೆ ಕುಂತು ತಿಂತಿರ್ತಾರಲ್ಲ?' ಅಂದಳು. ಸ್ನ್ಯಾಕ್ಸ್ (ತಿಂಡಿ) ಅವಳ ಬಾಯಿಯಲ್ಲಿ ಸ್ನೇಕ್ಸ್ ಆಗಿದ್ದಕ್ಕೆ ನಗೆ ಬಂತು.

**ನೀಲಮ್ಮ ಲಿಂಗಸುಗೂರು**



## ಬರುವಾಗ ಸಕ್ಕರೆ ತನ್ನಿ

ನಮ್ಮ ಮನೆಯವರು ಆಫೀಸಿನಿಂದ ಮನೆಗೆ ಬರಬೇಕಾದರೆ ಮುಖ್ಯ ರಸ್ತೆಯಿಂದಲೇ ಬರಬೇಕು. ಹೀಗಾಗಿ, ಅವರು ಆಫೀಸಿಗೆ ಹೋಗುವಾಗಲೇ ಆಯಾ ದಿನ ಮನೆಗೆ ಬೇಕಾಗುವ ಕಿರಾಣಿ ಸಾಮಾನು ತರಲು ಹೇಳುತ್ತಿದ್ದೆ. ಒಂದು ಭಾನುವಾರ ಅವರು ಟೀವಿ ನೋಡುತ್ತಾ ಕುಳಿತಿದ್ದರು. 'ಸಕ್ಕರೆ ಮುಗಿದಿದೆ, ಬರುವಾಗ ಸಕ್ಕರೆ ತನ್ನಿ' ಎಂದೆ. 'ಪ್ರತಿದಿನ ಏನಾದರೂ ಹೇಳುತ್ತಲೇ ಇರ್ತಿಯಾ. ಇವತ್ತು ರಜೆ ಇದೆ ಅಂತ ಆರಾಮಾಗಿ ಮನೆಯಲ್ಲಿರಲು ಕೂಡಾ ಬಿಡುವುದಿಲ್ಲ. ಹೀಗೇ ಮಾಡಿದ್ರೆ ನಾನು ಎಲ್ಲಿಗಾದರೂ ಹೋಗ್ತೀನಿ' ಎಂದರು. ಅಡುಗೆಮನೆಯಲ್ಲಿದ್ದ ನನಗೆ ಅವರ ಪೂರ್ತಿ ಮಾತು ಕೇಳಿಸಲಿಲ್ಲ. 'ಹೋಗ್ತೀನಿ' ಅನ್ನೊ ಕೊನೆಯ ಪದ ಮಾತ್ರ ಕೇಳಿಸಿತು. ಅದಕ್ಕೆ, 'ಆಯ್ತು, ಬರುವಾಗ ಸಕ್ಕರೆ ತನ್ನಿ' ಎಂದೆ. ಮಕ್ಕಳ ಜೊತೆ ಅವರೂ ಜೋರಾಗಿ ನಗತೊಡಗಿದರು.

**ಶಿವಲೀಲಾ ಸೊಪ್ಪಿಮಠ**

